
# ಟಿಫಿನ್ ಬಾಕ್ಸ್



ಕೆ. ಶಿವಲಿಂಗಪ್ಪ ಹಂದಿಹಾಳು

ಕಲೆ: ಸಂತೋಷ್ ಸಸಿಹಿತ್ಲು



ಆ ದಿನ ತರಗತಿಯೆಲ್ಲಾ ನಿಶ್ಯಬ್ದವಾಗಿತ್ತು. ಮೀನಾ ಮಿಸ್ ಒಂದೇ ಸಮನೆ ನೋಟ್ಸ್ ಬರೆಸುತ್ತಿದ್ದರು. ನಾವು ಬಲಗೈಯಿಂದ ಬರೆಯುತ್ತಲೇ, ಎಡಗೈಯಿಂದ ಹೊಟ್ಟೆ ಸವರಿಕೊಳ್ಳುತ್ತಿದ್ದೆವು. ಅಖಿಲ್ ಒಣಗಿದ ನಾಲಗೆಯನ್ನು ಹೊರಗೆ ಹಾಕುತ್ತಾ ನೀರು ಕುಡಿಯಲು ಕಾಯುತ್ತಿದ್ದ. ತಿಂಡಿಪೋತ ಅಭಿ ಮಾತ್ರ ಹಸಿವು ತಡೆದುಕೊಳ್ಳದೆ ನಿಕ್ಕರಿನ ಯಾವುದೋ ಮೂಲೆಯಲ್ಲಿ ಅಡಗಿದ್ದ ಶೇಂಗಾ ಬಾಯಿಗೆ ಹಾಕ್ಕೊಂಡು ಸಮಾಧಾನ ಪಡುತ್ತಿದ್ದ. ನಮ್ಮ ಮುನ್ನಿ ಮಾತ್ರ ಸಮಯ ಮಧ್ಯಾಹ್ನ ಒಂದು ಗಂಟೆಯಾಗುತ್ತಾ ಬಂದಿದ್ದರೂ ಈಗ ತಾನೆ ತರಗತಿಗೆ ಬಂದವಳಂತೆ ಲವಲವಿಕೆಯಿಂದ ಪಾಠ ಕೇಳುತ್ತಿದ್ದಳು. ಆದರೆ, ನಾವು ಹಸಿವು ತಡಕೊಳ್ಳಲಾರದೆ ಊಟದ ಗಂಟೆಗಾಗಿ ಕಾಯುತ್ತಿದ್ದೆವು.

ಪೀವನ್ ಅಂಬಣ್ಣ ಢಣ ಢಣ ಬಾರಿಸಿದ ತಕ್ಷಣವೇ ಹಿಂದುಮುಂದು ನೋಡದೆ ಪುಸ್ತಕಗಳನ್ನು ಮಡಚಿಟ್ಟು ಊಟದ ಬಟ್ಟಲುಗಳ ಕಡೆ ನೋಡಿದೆವು. ಮೀನಾ ಮಿಸ್ ಒಮ್ಮೆ ಹುಡುಗರನ್ನೆಲ್ಲಾ